ಎನ್‌ಕ್ವಾಯರಿಯನ್ನು ಮಾಡಿ ತಪ್ಪಿತಸ್ಥರಿಗೆ ಸರಿಯಾದಂಥ ಶಿಕ್ಷೆಯಾಗಬೇಕೆಂದು ಸಭೆಯ ಗಮನಕ್ಕೆ ಹಾಗೂ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಇಡೀ ದೇಶದ ಹಾಗೂ ರಾಜ್ಯದ ಕಣ್ಣನ್ನು ತೆಗೆಸತಕ್ಕಂಥ ಮೂತ್ರಪಿಂಡ ವ್ಯವಹಾರಗಳು ನಮ್ಮಲ್ಲಿ ನಡೆದಿವೆ. ಅದರ ಬಗ್ಗೆ ವ್ಯಾಪಕವಾಗಿ ಈ ಸದನದಲ್ಲಿ ಚರ್ಚೆಯಾಗಿದೆ. ಚರ್ಚೆಯಾಗಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಕ್ರಮ ಕೂಡ ಜರಗುತ್ತಿದೆ. ವೈದ್ಯರ ಸಮಿತಿಯನ್ನು ಮಾಡಿ ಆ ಸಮಿತಿಯ ಮೂಲಕ ಯಾರು ಡೋನರ್, ಯಾರಿಗೆ ಯಾರು ಕಿಡ್ನಿ ಕೊಡಬೇಕು ಎನ್ನತಕ್ಕಂಥದ್ದರ ಬಗ್ಗೆ ನಿಯಮಾವಳಿಗಳನ್ನು ಕೂಡ ರಚಿಸತಕ್ಕಂಥ ಕೆಲಸವಾಗಿದೆ. ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಈ ಪ್ರಕರಣ ನಡೆದಿದೆ ಎನ್ನತಕ್ಕಂಥ ಆಪಾದನೆಯನ್ನು ಮಾನ್ಯ ಸದಸ್ಯರು ಇವೊತ್ತು ಈ ಸದನದಲ್ಲಿ ಮಾಡಿದ್ದಾರೆ. ಅದು ನಡೆದಿದ್ದರೆ ಪೂರ್ಣವಾಗಿರತಕ್ಕಂಥ ಅಪರಾಧವಾಗುತ್ತದೆ. ಅದರ ಸತ್ಯಾಸತ್ಯತೆಯನ್ನು ಅರಿತು ಅಂತಹ ಘಟನೆ ನಡೆದಿದ್ದರೆ ತಪ್ಪಿತಸ್ಥರ ಮೇಲೆ ಖಂಡಿತವಾಗಿ ನಿಯಮಾವಳಿಗಳ ಪ್ರಕಾರ ಕಾನೂನು ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂಬ ಭರವಸೆಯನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

4. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ನಡೆದ ಗಲಭೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಹಾಗೆ ನಾನು ಮೊನ್ನೆ ಕೂಡ ಪ್ರಸ್ತಾಪ ಮಾಡಿದ್ದೆ. ನಾನು ಪ್ರಸ್ತಾಪ ಮಾಡಿದ ಮೇಲೆ ಒಂದು ಘಟನೆ ನಡೆದಿದೆ. ದಿನಾಂಕ 2-3-1996ರಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಕೆಲವು ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಚರ್ಚೆ ನಡೆದ ಸಂದರ್ಭದಲ್ಲಿ ಮುಖ್ಯವಾಗಿ ಪ್ರೊ|| ರಾಮದಾಸ್ ಮತ್ತು ಗೋವಿಂದಯ್ಯ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಗದ್ದಲವಾಗಿ ಅಲ್ಲಿನ ವೈಸ್ ಚಾನ್ಸಲರ್ ಸಿಂಡಿಕೇಟ್ ಸದಸ್ಯರ ಮೇಲೆ ಕೈ ಮಾಡಿ, ಬೇರೆಯವರಿಂದ ಕೈ ಮಾಡಿಸಿ ಆತನೇ ಸರಸ್ವತಿಪುರಂ ಪೋಲೀಸ್ ಸ್ಟೇಷನ್‌ನಲ್ಲಿ ಅವರಿಬ್ಬರ ಮೇಲೆ ಪೋಲೀಸ್ ಕಂಪ್ಲೇಂಟ್ ಕೊಡಿಸಿ ಎಲೆಕ್ಟೆಡ್ ಸಿಂಡಿಕೇಟ್ ಮೆಂಬರ್ಸ್‌ನ್ನು ಬಂಧನ ಮಾಡಿಸಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿರತಕ್ಕಂಥ ಘಟನೆ ಏನು ನಡೆದಿದೆ ಇದು ಇಡೀ ವಿಶ್ವವಿದ್ಯಾನಿಲಯದ ಗೌರವಕ್ಕೆ ಧಕ್ಕೆ ಬರತಕ್ಕಂಥ ಘಟನೆ. ಇಡೀ ದೇಶದಲ್ಲಿ ಅತ್ಯುನ್ನತ ಭವ್ಯ ಪರಂಪರೆಯನ್ನು ಹೊಂದಿರತಕ್ಕಂಥ ವಿಶ್ವವಿದ್ಯಾನಿಲಯ ಎಂದರೆ ಮೈಸೂರು ವಿಶ್ವವಿದ್ಯಾನಿಲಯ. ಆ ವಿಶ್ವವಿದ್ಯಾನಿಲಯದ ಕುಲಪತಿಗಳು ಇವೊತ್ತು ಇಡೀ ವಿಶ್ವವಿದ್ಯಾನಿಲಯದ ಗೌರವಕ್ಕೆ ಧಕ್ಕೆ ತರತಕ್ಕಂಥ ಸ್ಥಿತಿಗೆ ಕಾರಣರಾಗಿದ್ದಾರೆ. ಅದರ ಜೊತೆಗೆ 11ನೇ ತಾರೀಖು ನಡೆಯ ಬಹುದಾದಂಥ ಸಿಂಡಿಕೇಟ್ ಸಭೆಯಲ್ಲಿ ಅವರಿಬ್ಬರನ್ನು ಸಸ್ಪೆಂಡ್ ಮಾಡತಕ್ಕಂಥ ತೀರ್ಮಾನವಾಗತಕ್ಕಂಥಾದ್ದಿದೆ ಆದರೆ ಅವರಿಬ್ಬರನ್ನು ಸಸ್ಪೆಂಡ್ ಮಾಡತಕ್ಕಂಥದ್ದು ಸಂಪೂರ್ಣವಾಗಿ ತಪ್ಪು. ಅವರು ಸಸ್ಪೆಂಡ್ ಮಾಡತಕ್ಕಂಥ ಯಾವುದೇ

ರೀತಿಯ ಅಪರಾಧವನ್ನು ಮಾಡಿಲ್ಲ ಆದರ ಜೊತೆಗೆ ಗಾಂಧೀ ಭವನದಲ್ಲಿ ಗಾಂಧೀ ವಿಚಾರ ಕುರಿತು ವಿಚಾರ ಸಂಕೀರ್ಣ, ಅಲ್ಲಿ ಒಂದು ಅಂತರ್ ಜಾತಿ ವಿವಾಹವನ್ನು ಮಾಡತಕ್ಕಂಥ ಸಂದರ್ಭಕ್ಕೆ ನಡೆದಂಥ ಘಟನೆಗಳಲ್ಲಿ ನೀವು ವಿಶ್ವವಿದ್ಯಾಲಯಕ್ಕೆ ಕುಂದು ತರತಕ್ಕಂಥ ರೀತಿಯಲ್ಲಿ ಅನುಚಿತವಾಗಿ ವರ್ತನೆ ಮಾಡಿದ್ದೀರಿ ಎಂದು ಅವರಿಗೆ 8.1.1996ರಲ್ಲಿ ಷೋಕಾಸ್ ನೋಟಿಸ್ ಕೊಟ್ಟಿದ್ದರು. ಅದಕ್ಕೋಸ್ಕರ ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಬಹಳ ಸೌಮ್ಯ ಸ್ವಭಾವದವರಾದ ಉನ್ನತ ಶಿಕ್ಷಣ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ರಾಮದಾಸ್ ಮತ್ತು ಗೋವಿಂದಯ್ಯನವರಿಗೆ ನೀಡಿರುವಂಥ ಷೋಕಾಸ್ ನೋಟೀಸನ್ನು ಹಿಂದಕ್ಕೆ ಪಡೆದು ವಿಶ್ವವಿದ್ಯಾನಿಲಯದ ಗೌರವವನ್ನು ಕಾಪಾಡಬೇಕು. ಹಾಗೂ ಅವರನ್ನು ಯಾವುದೇ ಕಾರಣಕ್ಕೆ ಸಸ್ಪೆಂಡ್ ಮಾಡಬಾರದು. ಕಾರಣವೇನೆಂದರೆ ಅವರಿಬ್ಬರು ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟವರು, ಹಾಗೂ ನ್ಯಾಯ ಮತ್ತು ಗಾಂಧೀ ವಿಚಾರಗಳ ಬಗ್ಗೆ ವಿಚಾರ ಸಂಕೀರ್ಣ ಮಾಡಿರತಕ್ಕಂಥವರು. ಆ ರೀತಿ ಏನಾದರು ಆದರೆ ವಿಶ್ವವಿದ್ಯಾನಿಲಯದಲ್ಲಿ ಅಶಾಂತಿಯ ವಾತಾವರಣ ಬರುತ್ತದೆ. ಆದ ಕಾರಣ ಈಗಾಗಲೇ ತಾವು ತನಿಖೆ ನಡೆಸಲು ವಿಕ್ರಾಂತ್ ಟಯರ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಐ.ಎ.ಎಸ್. ಅಧಿಕಾರಿ ಕೆ.ಕೆ. ಮಿಶ್ರಾರವರನ್ನು ನೇಮಿಸಿದ್ದಾರೆ. ವಿಕ್ರಾಂತ್ ಟೈಯರ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ವಿಶ್ವವಿದ್ಯಾನಿಲಯದ ಆಗು ಹೋಗುಗಳ ಬಗ್ಗೆ ತನಿಖೆ ಮಾಡಿ ಎಂದು ಹೇಳುವುದು ಅಸಂಬದ್ಧವಾದದ್ದು. ಆದ್ದರಿಂದ ಅವರ ತನಿಖೆ ಬೇಡ. ಬೇಕಾದರೆ ತಾವು ನ್ಯಾಯಂಗ ತನಿಖೆಯನ್ನು ನಡೆಸಿ, ಅಪರಾಧಿಗಳನ್ನು ಶಿಕ್ಷೆಗೆ ಒಳಪಡಿಸಿ. ಏಕೆಂದರೆ ಆ ಕೆ.ಕೆ. ಮಿಶ್ರಾ ಹಾಗೂ ರಿಜಿಸ್ಟ್ರಾರ್ ಇಬ್ಬರು ಸ್ನೇಹಿತರು. ಅವರು ಮತ್ತು ವೈಸ್ ಚಾನ್ಸಲರ್‌ರವರು ಕೂಡ ಸ್ನೇಹಿತರು. ಆದಕಾರಣ ಅವರೇನಾದರೂ ತನಿಖೆ ನಡೆಸಿದರೆ ನ್ಯಾಯ ಸಿಗುತ್ತದೆ ಎಂಬುದು ಖಂಡಿತ ನಂಬಿಕೆ ಇಲ್ಲ. ಆದರ ಬದಲು ನೀವು ಬೇರೆ ಯಾರಿಂದಲಾದರೂ, ನ್ಯಾಯಂಗ ತನಿಖೆಯಾದರು ಮಾಡಿಸಿ. ಆದರೆ ಕೆ.ಕೆ. ಮಿಶ್ರಾರವರ ಕೈಯಿಂದ ದಯವಿಟ್ಟು ತನಿಖೆ ಮಾಡಿಸಬೇಡಿ. ಬೇಕಾದರೆ ಉನ್ನತ ಮಟ್ಟದ ವ್ಯಕ್ತಿಗಳಿಂದಾಗಲೀ, ಸದನದ ಸಮಿತಿಯ ಮತಿಯಿಂದಾಗಲೀ ತನಿಖೆ ಮಾಡಿಸಿ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇರತಕ್ಕಂಥ ಘನತೆ, ಗೌರವ ಆ ಭವ್ಯ ಪರಂಪರೆ ಉಳಿಸಿ. ವಿಷಯ ಸಮಿತಿಯಲ್ಲೂ ಕೂಡ ನನಗೂ ಅವರಿಗೂ ಯಾವುದೇ ಒಂದು ವಿಷಯದ ಮೇಲೆ ಚರ್ಚೆಯಾಗಿತ್ತು, ಅಂಥ ವ್ಯಕ್ತಿ ನಿಜಕ್ಕೂ ಅಂತಹ ಒಂದು ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಯಾಗಿರಲು ಲಾಯಕ್ಕಿಲ್ಲ. ಮೊದಲನೆಯದು ಗೋವಿಂದಯ್ಯ ಮತ್ತು ರಾಮದಾಸ್‌ರವರ ಸಸ್ಪೆನ್‌ಶನ್ ವಾಪಸ್ಸು ಪಡೆಯಬೇಕು. ಎರಡನೆಯದು ಆ ಸಿಂಡಿಕೇಟ್ ಮೆಂಬರ್ಸ್ ಮೇಲೆ ಏನು ಕ್ರಿಮಿನಲ್ ಮೊಕದ್ದಮೆ ಹೂಡಿದ್ದಾರೆ. ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮೂರನೆಯದು ಕೆ.ಕೆ. ಮಿಶ್ರಾರವರಿಂದ ತನಿಖೆ ಮಾಡಿಸುವುದು ಬೇಡ. ಬೇರೆ ಯಾರ ಕೈಯಿಂದಾದರು ಮಾಡಿಸಿ, ಸದನದ ಸಮಿತಿಯ ಮತಿಯಿಂದಾದರೂ ಮಾಡಿಸಿ ಮತ್ತು ಇಡೀ ಘಟನೆಗಳನ್ನು ತನಿಖೆ ಮಾಡಿಸಿ, ಇದಿ ವಿಶ್ವವಿದ್ಯಾನಿಲಯದ ಘನತ ಹಾಗೂ ಗೌರವವನ್ನು ಕಾಪಾಡಬೇಕು, ಹಾಗೂ

ಆ ವೈಸ್ ಚಾನ್ಸಲರ್‌ನ್ನು ದಯವಿಟ್ಟು ತೆಗೆಯಬೇಕು ಎಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ತಾವು ಉನ್ನತ ಶಿಕ್ಷಣ ಸಚಿವರಿದ್ದೀರಿ, ನಿಮ್ಮ ಬಗ್ಗೆ ನಮಗೆ ಗೌರವವಿದೆ. ನೀವು ಬಹಳ ಒಳ್ಳೆಯ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಅಧ್ಯಕ್ಷರೇ ಅಲ್ಲಿ ಉಪಕುಲಪತಿಗಳಿಂದ ಮಾದಯ್ಯನವರಿಗೂ ಮಾನವ ಸೌಹಾರ್ದ ಸಮಿತಿ ಎಂದು ಮಾಡಿತಕೊಂಡಿರುವ ಇವರಿಬ್ಬರಿಗೂ ಸುಮಾರು ನಾಲ್ಕೈದು ತಿಂಗಳಿಂದ ಗಲಾಟೆ ನಡೆಯುತ್ತಲೇ ಇದೆ. ಅದರಲ್ಲಿ ಗಾಂಧೀ ಭವನದ ವಿಷಯದ ಬಗ್ಗೆಯೇ ಬಹಳಷ್ಟು ಗಲಾಟೆ ನಡೆಯುತ್ತಿದೆ. ಒಂದು ಸಾರಿ ಎ.ಕೆ. ಸುಬ್ಬಯ್ಯನವರನ್ನು ಮತ್ತು ನನ್ನನ್ನು ಕರೆದಿದ್ದರು. ಇಂದಿನ ರಾಜಕೀಯ ಪರಿಸ್ಥಿತಿ ಬಗ್ಗೆ ವಿಶ್ಲೇಷಣೆ ಎಂಬ ವಿಷಯದ ಬಗ್ಗೆ ಮಾತನಾಡಲು ನನ್ನನ್ನು ಕರೆದಿದ್ದರು. ಅಲ್ಲಿ ಎರಡು ಗುಂಪುಗಳಾಗಿವೆ. ಮಾದಯ್ಯನವರಲ್ಲಿ, ಉಪಾಧ್ಯಾಯರಲ್ಲಿ ವಿಧ್ಯಾರ್ಥಿಗಳಲ್ಲಿ ಎಲ್ಲಾ ಕಡೆ ಅಶಾಂತಿಯ ವಾತಾವರಣ, ಜಾತೀಯತೆ ಎಲ್ಲಾ ಸೃಷ್ಟಿಯಾಗಿದೆ. ನಾನು ಹೇಳಿದೆ ನೀವೆಲ್ಲಾ ಓದಿ ಗ್ರಾಮಾಂತರ ಪ್ರದೇಶದಲ್ಲಿ ಒಂದು ತಿಳುವಳಿಕೆ ಕೊಟ್ಟು ಒಂದು ಶಾಂತಿಯುತವಾದ ವಾತಾವರಣ ನಿರ್ಮಾಣ ಮಾಡಬೇಕೆಂದು ಮಾನಸಗಂಗೋತ್ರಿ ಎಂದು ಹೆಸರನ್ನು ಇಟ್ಟುಕೊಂಡಿದ್ದೀರಿ, ನಾನು ಗ್ರಾಮೀಣ ಪ್ರದೇಶದಿಂದ ಬಂದು ನೀವು ಪಿ.ಹೆಚ್.ಡಿ. ಪದವೀಧರರು ನಿಮ್ಮನ್ನು ನಾವು ಸರಿ ಮಾಡಿವಂಥ ಪರಿಸ್ಥಿತಿ ಬಂದಿದೆ. ಅವರು ಯಾವುದೇ ಫಂಕ್ಷನ್‌ಗೆ ಲೆಟರ್ ಕೊಟ್ಟರೂ ಅವರಿಗೆ ಅವಕಾಶವಿಲ್ಲ. ನಾಳೆ ನಾವು ಫಂಕ್ಷನ್ ಮಾಡುತ್ತೇವೆ ಎಂದು ಹೇಳಿದರೆ ಎನ್.ಎಸ್.ಎಸ್. ಕ್ಯಾಂಪ್ ಆ ಮೇಲೆ ಉಪಾಧ್ಯಾಯರುಗಳು, ಆ ಮೇಲೆ ಆ ಫಂಕ್ಷನ್‌ಗೆ ಏನಾದರೂ ನೀವು ಬಂದರೆ ಪರಿಣಾಮ ಕೆಟ್ಟದ್ದಾಗುತ್ತದೆ ಎಂದು ಹೇಳಿ ಕೆಲವು ಹಾಸ್ಟೆಲ್ ಹುಡುಗರನ್ನು ಹೆದರಿಸತಕ್ಕಂಥದ್ದು ಇವೆಲ್ಲಾ ದುಷ್ಪರಿಣಾಮಗಳಾಗಿವೆ. ಒಬ್ಬ ಉಪಕುಲಪತಿಗಳಾದಂಥವರು ಹುಡುಗರನ್ನು ಕರೆದು ಗಾಂಧೀ ಭವನ ಯಾವ ರೀತಿ ಇರಬೇಕು, ವಿಶ್ವವಿದ್ಯಾನಿಲಯದ ವಾತಾವರಣ ಯಾವ ರೀತಿ ಇರಬೇಕು, ಗಂಗೋತ್ರಿಯ ವಾತಾವರಣ ಯಾವ ರೀತಿ ಇರಬೇಕು ಎಂದು ಚರ್ಚೆ ಮಾಡುವುದನ್ನು ಬಿಟ್ಟು ಕುಲಪತಿಗಳಾದವರೇ ದೊಡ್ಡದಾಗಿ ಪಾರ್ಟಿ ಕಟ್ಟಿಕೊಂಡರೆ ಹೇಗೆ? ಅವರದೇ ಆದ ಗುಂಪನ್ನು ಕಟ್ಟಿ ದ್ವೇಷ ಅಸೂಯೆ ಸೃಷ್ಟಿ ಮಾಡಿ ಅಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ಅದರ ಜೊತೆಗೆ ಯಾವಾಗ ನೋಡಿದರೂ ಪೋಲೀಸ್ ವ್ಯಾನ್. ಗಂಗೋತ್ರಿಯಲ್ಲಿ ಗಾಂಧೀ ಎಂದು ಹೆಸರು ಹೇಳಿದರೆ ಸಾಕು ಪೋಲೀಸ್ ವ್ಯಾನ್. ಆಮೇಲೆ ಆ ಗಾಂಧಿಭವನವ ಸುತ್ತ ನಿಷೇಧಾಜ್ಞೆ. ಆ ಗಾಂಧಿಗೆ ನಿಷೇಧಾಜ್ಞೆ. ಆ ನಿಷೇಧಾಜ್ಞೆ ಹಾಕಿ ಒಬ್ಬರು ಬೇಲಿಗೆ ಪೂಜೆ ಮಾಡುವುದು, ಒಬ್ಬರು ಮರಕ್ಕೆ ಪೂಜೆ ಮಾಡುವುದು. ಈ ರೀತಿ ಘರ್ಷಣೆ ನಡೆದುಕೊಂಡು ಬಂದಿದೆ. ನಿಜವಾಗಿಯೂ ಅಲ್ಲಿ ವಿದ್ಯಾರ್ಥಿಗಳು, ಉಪಾಧ್ಯಾಯರುಗಳ ಮಧ್ಯೆ ಗುಂಪುಘರ್ಷಣೆಯ ಮೂಲಕ ಅಶಾಂತಿಯ ವಾತಾವರಣ ಸೃಷ್ಟಿಯಾಗಿದೆ. ದಯವಿಟ್ಟು ಉನ್ನತ ಶಿಕ್ಷಣ ಸಚಿವರು ಒಂದು ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ. ಇದರಲ್ಲಿ ಕುಲಪತಿಗಳು

ಎಲ್ಲರನ್ನೂ ಕರೆಯಿಸಿ ಗಂಭೀರವಾಗಿ ಮಾತನಾಡಿ ಗಾಂಧೀ-ಭವನ ಹೇಗಿರಬೇಕು, ಗಂಗೋತ್ರಿಯಲ್ಲಿ ವಾತಾವರಣ ಹೇಗಿರಬೇಕು ಎಂದು ಚರ್ಚೆ ಮಾಡಬೇಕೇ ಹೊರತು ಪೋಲಿಸಿನವರ ಮೂಲಕ, ಗುಂಪುಕಟ್ಟುವುದರ ಮೂಲಕ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಆದಕಾರಣ ನಾನು ಶ್ರೀರಾಮರೆಡ್ಡಿಯವರು ಹೇಳಿದ ವಿಷಯಕ್ಕೆ ಬೆಂಬಲಿಸುತ್ತೇನೆ. ತಾವು ದಯವಿಟ್ಟು ಇದನ್ನು ಗಂಭೀರವಾಗಿ ತೆಗೆದುಕೊಂಡು ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ತಿಂಗಳ ಎರಡನೇ ತಾರೀಖು ನಡೆದ ಘಟನೆಯ ಬಗ್ಗೆ ಮೇಲ್ಮನೆಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದರು ಅದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಎರಡನೇ ತಾರೀಖು ಘಟಿಕೋತ್ಸವ ಆಗುವುದಕ್ಕಿಂತ ಮುಂದೆ ಪರೀಕ್ಷೆಯಲ್ಲಿ ಪಾಸಾದಂಥವರ ಲೀಸ್ಟ್‌ನ್ನು ಮೀಟಿಂಗ್‌ನಲ್ಲಿಟ್ಟು ಅಪ್ರೂವ್ ಮಾಡಿಸತಕ್ಕಂಥದ್ದು. ಡಾ. ಮಹಾದೇವ ಹಾಗೂ ವೆಂಕಟೇಶ್ ಇಬ್ಬರೂ ಸಿಂಡಿಕೇಟ್ ಸದಸ್ಯರು. ಆ ಸಂದರ್ಭದಲ್ಲಿ ಡಾ. ಮಹಾದೇವ ಮಗಳ ಎಂ.ಬಿ.ಬಿ.ಎಸ್. ಪರೀಕ್ಷೆ ಫಲಿತಾಂಶ ಪ್ರಕಟ ಮಾಡಿಲ್ಲ ಎನ್ನುವ ಉದ್ದೇಶಕ್ಕೋಸ್ಕರ ಗಲಾಟೆ ಪ್ರಾರಂಭವಾಗಿ ಜಗಳವಾಯಿತು. ಅಲ್ಲಿ ಅವರಿಬ್ಬರಿಗೂ ಪಾಗ್ದಾವ ನಡೆದಿದೆ. ಅಷ್ಟೊತ್ತಿಗೆ ಪೋಲಿಸನವರು ಬಂದು ಡಾ: ಮಹಾದೇವರವರನ್ನು ಹಾಗೂ ಡಾ: ವೆಂಕಟೇಶರವರನ್ನು ಅರೆಸ್ಟ್ ಮಾಡಿ ಕೇಸನ್ನು ದಾಖಲು ಮಾಡಿಕೊಂಡರು. ಆ ಮೇಲೆ ಅವರೂ ಒಂದು ಕೇಸ್ ದಾಖಲು ಮಾಡಿದರು ನಮ್ಮನ್ನು ಹೊಡೆದರು ಎಂದು. ಅಲ್ಲೇ ಎರಡು ಗುಂಪುಗಳು ಇರುವುದರಿಂದ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ನೀವೇ ವಿಚಾರಣೆ ಮಾಡಿ ಒಂದು ವರದಿಯನ್ನು ಕಳುಹಿಸಿಕೊಡಿ ಎಂದು ಹೇಳುವ ಪರಿಸ್ಥಿತಿಯಲ್ಲಿಲ್ಲ. ಅದಕ್ಕೆ ನಾವೇನ್ಮಾಡಿದ್ದೇವೆಂದರೆ ಒಬ್ಬ ಸೀನಿಯರ್ ಆಫೀಸರ್‌ರವರನ್ನು ಹುಡುಕಿ ವಿಕ್ರಾಂತ್ ಟೈರ್ಸ್‌ನ ಸಿ.ಎಂ.ಡಿ ಆಗಿರತಕ್ಕಂಥ ಐ.ಎ.ಎಸ್. ಶ್ರೇಣಿಯ ಮಿಶ್ರಾರವರಿಗೆ ಇದರ ಬಗ್ಗೆ ವಿಚಾರಣೆ ನಡೆಸಿ ಒಂದು ವಾರದೊಳಗೆ ವರದಿಯನ್ನು ಕಳುಹಿಸಿ ಎಂದು ಹೇಳಿದ್ದೇವೆ. ಈಗ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಅವರು ಮತ್ತು ಇವರು ತುಂಬಾ ಸ್ನೇಹಿತರು ಎಂಬ ವಿಷಯ ನಮಗೇನೂ ಗೊತ್ತಿಲ್ಲ. ಈಗಾಗಲೇ ಅವರಿಗೆ ಒಂದು ವಾರದಲ್ಲಿ ವರದಿ ಕಳುಹಿಸಿ ಎಂದು ಹೇಳಿ ಮೂರು ದಿವಸಗಳಾಗಿವೆ. ಆ ವರದಿ ಬರಲಿ, ಒಂದು ವೇಳೆ ಆ ವರದಿ ಸರಿಯಿಲ್ಲವೆಂದೆನಿಸಿದರೆ ಬೇಕಾದರೆ ಇನ್ನೊಬ್ಬರನ್ನು ಅಲ್ಲಿ ಅಪಾಯಿಂಟ್ ಮಾಡಿ ಇನ್ನೊಮ್ಮೆ ವರದಿ ಮಾಡಿಸಬೇಕಾಗುತ್ತದೆ. ಅಲ್ಲಿ ಯಾರದೋ ವೈಯಕ್ತಿಕವಾದ ವಿಚಾರದಲ್ಲಿ ಅಂದರೆ ಅವರ ಮಗಳ ರಿಸಲ್ಟ್ ಅನೌನ್ಸ್ ಮಾಡಿಲ್ಲ, ಇದಕ್ಕೆ ಸಂಬಂಧಪಟ್ಟಂತೆ ಅಲ್ಲಿ ಯಾರೋ ಇಬ್ಬರು ಮೂವರು ಅರ್ಜಿ ಕೊಟ್ಟರು, ಅದರಲ್ಲಿ ನಿಮ್ಮ ಸಿಂಡಿಕೇಟ್ ಮೆಂಬರ್ ಮಗಳ ರಿಸಲ್ಟ ಬಗ್ಗೆ ನಮಗೆ ಅನುಮಾನವಾಗಿದೆ, ಆದ ಕಾರಣ ಇದನ್ನು ವಿಚಾರಣೆ ಮಾಡಿ ಮತ್ತು ವಿರಿಫೈ ಮಾಡಿಯಾದ ಮೇಲೆ ರಿಸಲ್ಟ ಅನೌನ್ಸ ಮಾಡಿ ಎಂದು ಬರೆದಿದ್ದರು. ಆಕೆ ಪಾಸಾಗಿದ್ದಾಳೆ, ರಿಸಲ್ಟ್ ಅನೌನ್ಸ್ ಮಾಡಿಯಾಗಿದೆ. ವಿಚಾರಣೆ ಮಾಡಲಿಕ್ಕೆ ಈಗಾಗಲೇ ಆದೇಶ ಕೊಟ್ಟಿದೆ, ಅವರು ವಿಚಾರಣೆ ಮಾಡಿ ಒಂದು ವಾರದೊಳಗೆ ವರದಿ ಕೊಡುತ್ತಾರೆ.

ಆದರೆ ಇನ್ನೊಂದು ವಿಷಯವನ್ನು ತಾವು ಹೇಳಿದಿರಿ, ರಾಮದಾಸ ಮತ್ತು ಗಾಂಧೀ ಭವನದ ಬಗ್ಗೆ ಹೇಳಿದಿರಿ. ಆದರೆ ಅದರ ಬಗ್ಗೆ ನನಗೆ ಯಾವ ವಿಷಯಗಳು ಬಂದಿಲ್ಲ. ಅದರ ವಿಷಯಕ್ಕೆ ಸಂಬಂಧಪಟ್ಟಂತೆ ಬೇಕಾದರೆ ಕೂಲಂಕುಷವಾದ ವರದಿಯನ್ನು ತರಿಸುತ್ತೇನೆ. ಏಕೆಂದರೆ ಈಗ ನನಗೆ ಆ ವಿಷಯ ಗೊತ್ತಿಲ್ಲ. ಅಲ್ಲಿ ಏನು ನಡೆದಿದೆ ಎಂದು ಗೊತ್ತಿಲ್ಲ. ಪುಟ್ಟಣ್ಣಯ್ಯನವರು ಹೇಳಿದರು ನಾನು ಮತ್ತು ಸುಬ್ಬಯ್ಯನವರು ಅವೊತ್ತು ಗಾಂಧೀ ಭವನಕ್ಕೆ ಭಾಷಣ ಮಾಡಲು ಹೋಗಿದ್ದೆವು ಎಂದು ಹೇಳಿದರು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನು ಏನು ಹೇಳಿದೆಯೆಂದರೆ ನೀವಿಬ್ಬರೂ ಒಂದು ಕಡೆ ಕುಳಿತು ಕಲೆತು ಈ ಸಮಸ್ಯೆಯನ್ನು ಸಮಾಪ್ತಿ ಮಾಡಿಕೊಳ್ಳಿ, ಇದು ನೋಡುವವರಿಗೆ ಅಸಹ್ಯವಾಗಿರತ್ಕಂಥ ಕೆಲಸವೆಂದು ಹೇಳಿ ಇದರ ಬಗ್ಗೆ ಮಾದಯ್ಯನವರ ಜೊತೆ ನಾನು ಮಾತನಾಡಬೇಕೆಂದು ಅವರ ಕಡೆಯವರ ಮುಖಾಂತರ ಹೇಳಿ ಕಳುಹಿಸಿದೆ. ಕನಿಷ್ಟ ಸೌಜನ್ಯಕ್ಕಾದರೂ ಜನ ಪ್ರತಿನಿಧಿಗಳು ಬಂದಿದ್ದಾರೆ, ಒಳ್ಳೆಯ ಆಲೋಚನೆಯನ್ನು ಮಾಡಿದ್ದಾರೆ ಎಂದು ಹೇಳಿ ಮಾದಯ್ಯನವರು ಬರಲಿ ಮಾತನಾಡೋಣ ಒಂದು ಸಮಸ್ಯೆಯನ್ನು ಬಗೆಹರಿಸೋಣ ಎನ್ನುವ ಔದಾರ್ಯವಾದ ಭಾವನೆಯನ್ನೂ ಕೂಡ ಅವರು ತೋರಿಸಲಿಲ್ಲ.

ಶ್ರೀ ಡಿ. ಮಂಜುನಾಥ್ : ಆಯಿತು, ಆ ಘಟನೆಯನ್ನು ನನಗೆ ವಿಚಾರವೇ ಗೊತ್ತಿಲ್ಲ, ಬೇಕಾದರೆ ಅದನ್ನು ಎನಕ್ವೈರಿ ಮಾಡಲು ನಮ್ಮ ಆಫೀಸರ್ ಯಾರಾನ್ನಾದರೂ ಕಳುಹಿಸಿ ಆ ರಿಪೋರ್ಟ್‌ನ್ನು ತರಿಸುತ್ತೇನೆ. ಏಕೆಂದರೆ ಗಾಂಧೀ ಭವನದ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಗಾಂಧೀಯನ್ ಸ್ಟಡೀಸ್ ಎಂದು ಇದೆ. ಅದನ್ನೂ ಅವರು ಆಗಿಂದಾಗ್ಗೇ ಕರೆಯುತ್ತಾರೆ. ಈ ಗಾಂಧೀಭವನವನ್ನು ಬೇರೆಯವರಿಗೆ ಮೀಟಿಂಗ್‌ಗಳಿಗೆ ಕೊಡುವುದಿಲ್ಲ. ಅಲ್ಲಿ ಗಾಂಧೀ ಬಗ್ಗೆ ಚರ್ಚಾ ಕೂಟ ಅದೂ ಇದೂ ನಡೆಯುತ್ತಿರುತ್ತದೆಯಾದ ಕಾರಣ ಬೇರೆಯವರಿಗೆ ಮೀಟಿಂಗ್‌ಗಳಿಗೆ ಕೊಡುವುದಿಲ್ಲವೆನ್ನುವುದು ನನಗೆ ಗೊತ್ತು. ಅದರಿಂದ ಅವರಿಬ್ಬರನ್ನು ಸಸ್ಪಂಡ್ ಮಾಡಬೇಕು ಎಂದು ಹೇಳಿ ಈಗ ಸಿಂಡಿಕೇಟ್ ಮೀಟಿಂಗ್‌ನಲ್ಲಿ ಅವರಿಗೆ ಷೋಕಾಸ್ ನೋಟಿಸ್ ಇಶ್ಯೂ ಮಾಡಿದ್ದಾರೆಂದು ಈಗ ರೆಡ್ಡಿಯವರು ಹೇಳುತ್ತಿದ್ದಾರೆ. ಆದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಇಶ್ಯೂ ಮಾಡಿದ್ದಾರೆ.

ಶ್ರೀ ಡಿ. ಮಂಜುನಾಥ್ : ಇರಬಹುದು, ಆದರೆ ಅದು ನನಗೆ ಗೊತ್ತಿಲ್ಲ, ನಾನು ಇವೋತ್ತೇ ಅವರ ಹತ್ತಿರ ಮಾತನಾಡುತ್ತೇನೆ, ಏಕೆಂದರೆ, ನನಗೆ ವಿಷಯವೇ ಗೊತ್ತಿಲ್ಲದೆ ನಾನು ಏನನ್ನೂ ಕೂಡ ಆ ವಿಷಯದ ಬಗ್ಗೆ ಇಲ್ಲಿ ಹೇಳುವುದಕ್ಕಾಗವುದಿಲ್ಲ. ಅವರನ್ನು ಕರೆಯಿಸಿ, ಅವರಿಗೆ ಯಾವ ಕಾರಣಕ್ಕೋಸ್ಕರ ನೋಟಿಸ್ ಇಷ್ಯೂ ಮಾಡಿದ್ದಾರೆ, ಯಾವ ಕಾರಣಕ್ಕೋಸ್ಕರ ಅವರನ್ನು ಸಸ್ಪೆಂಡ್ ಮಾಡಿದ್ದಾರೆ ವಿಷಯವನ್ನೆಲ್ಲಾ ನಾನು ತಿಳಿದುಕೊಂಡು ಆಮೇಲೆ ಇದರ ಬಗ್ಗೆ ಮಾತನಾಡಬೇಕಾಗುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಅಲ್ಲಿ ಈ

ಒಂದು ವರ್ಷದಲ್ಲಿ ಸ್ಟೂಡೆಂಟ್ಸ್ ಅನರಸ್ಟ್ ಇಲ್ಲ. ಕ್ಯಾಂಪಸ್ ಶಾಂತವಾಗಿದೆ. ಈ ಗಲಾಟೆಗಳ ಎರಡು ಇನ್ಸಿಡೆಂಟ್ಸ್ ಬಿಟ್ಟರೆ ವಿದ್ಯಾರ್ಥಿಗಳ ಬಗ್ಗೆ ತಿಳಿದ ಮಟ್ಟಿಗೆ ಪರಿಸ್ಥಿತಿ ಸಂಪೂರ್ಣ ಶಾಂತವಾಗಿದೆ. ಆದ್ದರಿಂದ ಈಗ ತಾವು ಏನು ಹೇಳಿದ್ದೀರಿ, ವೈಸ್ ಚಾನ್ಸಲರನ್ನು ತೆಗೆದು ಹಾಕುವುದು ಎಂದು, ಅವರನ್ನು ತೆಗೆದುಹಾಕುವುದಕ್ಕೆ ಆಗುವುದಿಲ್ಲ ಏಕೆಂದರೆ, ಅದಕ್ಕೆ ಕಾನೂನು ಪ್ರಕಾರವೇ ಮಾಡಬೇಕಾಗುತ್ತದೆ. ಅದಕ್ಕೂಸ್ಕರ ಎರಡು ವಿಷಯದಲ್ಲಿ ಈಗಾಗಲೇ ನಾನು ಗಮನಹರಿಸಿದ್ದೇನೆ. ಆದರೆ ರಾಮದಾಸ್ ಮತ್ತು ಗೋವಿಂದಯ್ಯನವರಿಗೆ ಸಸ್ಪೆಂಡ್ ಮಾಡಿರುವ ಬಗ್ಗೆಯಾಗಲಿ ಮತ್ತು ಷೋಕಾಸ್ ನೋಟಿಸ್ ಇಶ್ಯೂ ಮಾಡಿರುವ ಬಗ್ಗೆಯಾಗಲೀ ನನಗೆ ಗೊತ್ತಿಲ್ಲ. ಅದನ್ನು ವಿಚಾರ ಮಾಡುತ್ತೇವೆಂದು ಮಾನ್ಯ ಅಧ್ಯಕ್ಷರ ಮೂಲಕ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಇಷ್ಟೆ, ನಾನು ಈ ವಿಷಯಗಳ ಬಗ್ಗೆ ಮಾತನಾಡಿದಾಗ ನೀವು ಇಲ್ಲಿ ಏಕೆ ನೋಟಿಸ್ ಕೊಟ್ಟಿದ್ದಾರೆ, ಏನು ಕಾರಣ ಎನ್ನುವುದರ ಬಗ್ಗೆ ವಿವರಗಳನ್ನು ಸಂಪೂರ್ಣವಾಗಿ ಹೇಳಿದ್ದೇನೆ. ದಾಖಲೆ ತರಿಸಿಕೊಂಡು ಹೇಳಿದ್ದೇನೆ. ದಿನಾಂಕ 08-01-96ರಂದು ಗಾಂಧೀಭವನದಲ್ಲಿ ಗಾಂಧೀ ವಿಚಾರಧಾರೆಗಳ ಸಮಕಾಲೀನ ಪ್ರಸ್ತುತೆ ಬಗ್ಗೆ ವಿಚಾರ ಸಂಕಿರಣ. ಅದನ್ನು ನಡೆಸಬೇಕೆಂದು ಇವರು ಅರ್ಜಿ ಕೊಟ್ಟಾಗ ಇವರು ನಿರಾಕರಣೆ ಮಾಡಿದ್ದಾರೆ. ನಿರಾಕರಣೆ ಮಾಡಿರುವುದು ತಪ್ಪು ಎಂದು ಹೇಳಿ ಅವರು ಧರಣಿ ಕುಳಿತಿದ್ದಾರೆ. ಅದಕ್ಕೂಸ್ಕರ ವಿಶ್ವವಿದ್ಯಾನಿಲಯಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದೀರಿ ಎಂದು ಹೇಳಿ ಇವರಿಗೆ ಶೋಕಾಸ್ ನೋಟಿಸ್ ಕೊಟ್ಟು ಅದರ ಪ್ರಕಾರ ಸಸ್ಪೆಂಡ್ ಮಾಡಬೇಕು ಎಂದು ಹೇಳಿ 02-03-96ರಲ್ಲಿ ಅದನ್ನು ರ್ಯಾಟಿಫೈ ಮಾಡಲಿಕ್ಕೆ ಸಿಂಡಿಕೇಟ್ ಮೀಟಿಂಗನಲ್ಲಿ ಈ ವಿಚಾರವನ್ನು ತಂದಾಗ ಈ ಘರ್ಷಣೆಯಾಗಿದೆ. ಅದನ್ನು ಆ ದಿನ ರದ್ದು ಮಾಡಿದ್ದಾರೆ. ಇನ್ನೊಂದು ಡಾ: ಮಹದೇವ ಅವರ ಮಗಳ ಬಗ್ಗೆ ನೀವು ಏನು ಹೇಳಿದ್ದೀರಿ.....

MR. SPEAKER : Please do not drag the discussion.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆದ್ದರಿಂದ ನಾನು ಹೇಳುವುದು ಇಷ್ಟೆ, ಕೆ.ಕೆ. ಮಿಶ್ರಾರವರ ತನಿಖೆ ದಯವಿಟ್ಟು ಬೇಡ.

5. ಸ್ಪಾಪ್ ಗ್ಯಾಟ್ ಉಪನ್ಯಾಸಕರಿಗೆ ಬಾಕಿ ವೇತನ ನೀಡುವಲ್ಲಿ ಹಾಗು ಅವರನ್ನು ಖಾಯಂ ಮಾಡುವಲ್ಲಿ ಆಗಿರುವ ಅವ್ಯವಹಾರ.

MR. SPEAKER : Let the report come ಎಂದು ಹೇಳಿದ್ದಾರೆ. Please do not.....

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಸನ್ಮಾನ್ಯ ಅಧ್ಯಕ್ಷರೇ, ಒಂದು ಅತ್ಯಂತ ಪ್ರಮುಖವಾದಂಥ ವಿಚಾರವನ್ನು ನಿಯಮ 351ರ ಅಡಿಯಲ್ಲಿ ಎತ್ತಬೇಕೆಂದು ನಾನು ಪ್ರಯತ್ನ